**Asia Floor Wage Alliance**

# <u>ಅಮೆರಿಕದ ಟ್ಯಾರಿಫ್ ವಿಧಿಸುವಿಕೆಯು ಲಕ್ಷಾಂತರ ಮಂದಿ ಗಾರ್ಮೆಂಟ್ ಕೆಲಸಗಾರರಿಗೆ ಬೆದರಿಕೆಯೊಡ್ಡಿರುವುದರಿಂದ ಬ್ರ್ಯಾಂಡ್‌ಗಳು ಹೊಣೆಗಾರಿಕೆಯಿಂದ ವರ್ತಿಸುವಂತೆ ಏಷ್ಯಾ ಫ್ಲೋರ್ ವೇಜ್ ಅಲೈಯನ್ಸ್ ಬೇಡಿಕೆಯಿಡುತ್ತದೆ</u>

*ಜುಲೈ ೨೦೨೫*

ಏಷ್ಯಾ ಫ್ಲೋರ್ ವೇಜ್ ಅಲೈಯನ್ಸ್ (AFWA), ಏಷ್ಯಾದಾದ್ಯಂತವಿರುವ ಗಾರ್ಮೆಂಟ್ ಕಾರ್ಮಿಕರನ್ನು ಪ್ರತಿನಿಧಿಸುವ ಒಂದು ಟ್ರೇಡ್ ಯೂನಿಯನ್‌ಗಳ ಮೈತ್ರಿಕೂಟವಾಗಿದ್ದು, ಕಾರ್ಮಿಕರ ಹಿತಾಸಕ್ತಿಗಳನ್ನು ಬದಿಗೊತ್ತಿ ಜಾಗತಿಕ ಅಸಮಾನತೆಯನ್ನು ಹೆಚ್ಚಿಸುವಂಥ ನೀತಿಗಳನ್ನು ವಿರೋಧಿಸುತ್ತದೆ. ಇತ್ತೀಚೆಗೆ, ಏಷ್ಯಾದಿಂದ ಬಟ್ಟೆ ಆಮದು ಮೇಲೆ ಅಮೆರಿಕ ವಿಧಿಸಿರುವ ಸುಂಕಗಳು ಲಕ್ಷಾಂತರ ಗಾರ್ಮೆಂಟ್ಸ್ ಕಾರ್ಮಿಕರ ಜೀವನೋಪಾಯಕ್ಕೆ ಅಪಾಯ ಒಡ್ಡಿದ್ದು, ವಿಶೇಷವಾಗಿ ತೀರಾ ಅಲ್ಪ ವೇತನಕ್ಕೆ ದುಡಿಯುತ್ತಿರುವ ಮಹಿಳೆಯರಿಗೆ ಅಪಾಯವೊಡ್ಡಿದೆ.

ಕೋವಿಡ್-19 ಮಹಾಮಾರಿಯ ಸಮಯದಲ್ಲಿ ಜಾಗತಿಕ ಬ್ರ್ಯಾಂಡ್‌ಗಳು ತಮ್ಮ ಹೊಣೆಗಾರಿಕೆ ಮರೆತು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಕಡಿತ ಮಾಡಿದವು, ಫ್ಯಾಕ್ಟರಿಗಳನ್ನು ಮುಚ್ಚಿದವು, ವೇತನಗಳನ್ನು ಕಬಳಿಸಿದವು ಜೊತೆಗೆ, ಲಿಂಗಾಧಾರಿತ ಹಿಂಸೆ ಮತ್ತು ಕಿರುಕುಳವನ್ನು ಜಾಸ್ತಿಮಾಡಿದವು. ಈ ಗಾಯದ ಮೇಲೆ ಈಗ ಬರೆ ಎಳೆದಿರುವುದು ಸುಂಕ ವಿಧಿಸುವಿಕೆಯಾಗಿದ್ದು ಮಾನವೀಯ ಬಿಕ್ಕಟ್ಟು ಉಂಟುಮಾಡುತ್ತದೆ. ಈ ಭೌಗೋಳಿಕ ರಾಜಕೀಯ ಹೊಡೆತ ಬೀಳುವುದು ಗಾರ್ಮೆಂಟ್ ಕಾರ್ಮಿಕರ ಮೇಲೆಯೇ. ಅವರಲ್ಲಿ ಹೆಚ್ಚಿನವರು ಮಹಿಳೆಯರಾಗಿದ್ದು, ಉದ್ಯೋಗ ಕಳೆದುಕೊಂಡು ಕಡುಬಡತನಕ್ಕೆ ನೂಕಲ್ಪಡುವ ಅವಸ್ಥೆಯಲ್ಲಿದ್ದಾರೆ. ಆದರೆ, ಬ್ರ್ಯಾಂಡ್‌ಗಳಿಗೆ ಮನುಷ್ಯರಿಗಿಂತ ಲಾಭವೇ ಮುಖ್ಯವಾಗಿಬಿಟ್ಟಿದೆ.

"ರಾಜಕೀಯ ಸಂಘರ್ಷಗಳಲ್ಲಿ ಸುಂಕಗಳನ್ನು ಒಂದು ಅಸ್ತ್ರವಾಗಿ ಬಳಸುವುದು ನ್ಯಾಯವಲ್ಲ. ಸಹಮಾನವರ ಮೇಲೆ ತೀವ್ರ ಪರಿಣಾಮ ಬೀರುವಂಥ ಸುಂಕ ನೀತಿಯನ್ನು ನಾವು ವಿರೋಧಿಸುತ್ತೇವೆ" ಎಂದು AFWA ಯ ಡೆಪ್ಯುಟಿ

# Asia Floor Wage Alliance

ಇಂಟರ್ನ್ಯಾಷನಲ್ ಕೋಆರ್ಡಿನೇಟರ್ ಆಗಿರುವ ವಿರಂಟ ಗಿಂಟಿಗ್ ತಿಳಿಸಿದರು. ಅವರು ಹೇಳಿದ್ದು, "ಉತ್ಪಾದನೆಗಾಗಿ ಕಾರ್ಮಿಕರನ್ನು ಬಳಸಿಕೊಂಡು ಲಾಭಗಿಟ್ಟಿಸುವ ಬ್ರಾಂಡ್‌ಗಳು ಸುಂಕಗಳ ಬದಲಾವಣೆಯಿಂದಾಗಿ ಫ್ಯಾಕ್ಟರಿಗಳು ಮುಚ್ಚಿ ನಿರುದ್ಯೋಗ ಹೆಚ್ಚುವಾಗ ಮೌನವಹಿಸುವುದು ತರವಲ್ಲ."

ಗಾರ್ಮೆಂಟ್ ಉದ್ಯಮದಲ್ಲಿ ಜಾಗತಿಕ ಮಟ್ಟದಲ್ಲಿ ನ್ಯಾಯ ಮತ್ತು ಸಮಾನತೆ ಹೆಚ್ಚಿಸಲು ನಾವು ಕೆಳಗಿನ ನಾಲ್ಕು ಪ್ರಮುಖ ತತ್ತ್ವಗಳನ್ನು ನೀಡುತ್ತಿದ್ದೇವೆ. ಇವು ಗಾರ್ಮೆಂಟ್ ಉದ್ಯಮದ ಜಾಗತಿಕ ವ್ಯಾಪಾರದ ಪುನರ್‌ರಚನೆಗೆ ಆಧಾರವಾಗಬೇಕು:

**1.** ಸುಂಕಗ**ಳನ್ನು ಅಸ್ತ್ರವಾಗಿ ಬಳಸುವುದನ್ನು ತ್ಯಜಿಸಿ**

ಸುಂಕಗಳು ರಾಷ್ಟ್ರದ ಆದಾಯ ಹೆಚ್ಚಿಸಿ ಆರ್ಥಿಕ ಸಾಮರ್ಥ್ಯ ವರ್ಧಿಸುವ ಸಾಧನವಾಗಿದೆ. ಹಾಗಿದ್ದರೂ, ಜಾಗತಿಕ ಉತ್ಪಾದನಾ ಆರ್ಥಿಕತೆಯ ಸಂದರ್ಭದಲ್ಲಿ ಅವು ಇನ್ನೆರಡು ಗುರಿಗಳನ್ನು ಸಹ ಹೊಂದಿರಬಹುದು.:

i. ಕಾರ್ಮಿಕರಿಗೆ ನ್ಯಾಯ ಹಾಗೂ ಉದ್ಯೋಗ ಒದಗಿಸುವ ಸಲುವಾಗಿ ಉತ್ಪಾದನೆಯನ್ನು ಪುನರ್‌ರಚಿಸುವುದು.

ii. ರಾಜಕೀಯ ಕಾರಣಗಳಿಂದಾಗಿ ಕೆಲವು ದೇಶಗಳ ಆರ್ಥಿಕತೆಯ ಮೇಲೆ ನಿರ್ಬಂಧ ಹೇರುವುದು.

ಮೊದಲ ಉದ್ದೇಶವಾಗಿರುವಲ್ಲಿ, ಸುಂಕಗಳ ನೀತಿ ಗಾರ್ಮೆಂಟ್ ಉತ್ಪಾದನೆಯನ್ನು ಅಮೆರಿಕಕ್ಕೆ ವರ್ಗಾಯಿಸಿ ಅಲ್ಲಿನ ಕೆಲಸಗಾರರಿಗೆ ಉದ್ಯೋಗವಕಾಶ ನೀಡುವಲ್ಲಿ ಕಾರ್ಮಿಕರ ಮೇಲಿನ ಹಿತಾಸಕ್ತಿಯಿಂದ ಇದನ್ನು ಮಾಡಲಾಗಿದೆ ಎಂದು ನಾವು ಭಾವಿಸಬಹುದು. ಆದರೆ, ಇವತ್ತಿನ ಪರಿಸ್ಥಿತಿಯಲ್ಲಿ ಅಮೆರಿಕಕ್ಕೆ ಗಾರ್ಮೆಂಟ್ ಉತ್ಪಾದನೆಯನ್ನು ವರ್ಗಾಯಿಸುವುದು ಅಸಾಧ್ಯ. ಏಕೆಂದರೆ, ಉತ್ಪಾದನಾ ವೆಚ್ಚವು ಗಗನಕ್ಕೇರಿ ಅಮೆರಿಕಾದ ಗ್ರಾಹಕರಾಗಲಿ ಅಥವಾ ಪ್ರಪಂಚದ ಬೇರೆ ದೇಶಗಳ ಗ್ರಾಹಕರಾಗಲಿ ಬಟ್ಟೆ ಖರೀದಿಸಲಾಗದಂಥ ಪರಿಸ್ಥಿತಿ ಉಂಟಾಗುತ್ತದೆ. ಹಾಗಾಗಿ ವಸ್ತ್ರ ಉದ್ಯಮಗಳ ಮೇಲಿನ ಸುಂಕಗಳು ಗಾರ್ಮೆಂಟ್ ಉತ್ಪಾದನೆಯನ್ನು ಅಮೆರಿಕಕ್ಕೆ ವರ್ಗಾಯಿಸಿ ಪುನರ್‌ರಚನೆ

ಮಾಡುವುದು ಬಲುಕಷ್ಟ. ಹಾಗಾದರೆ, ಅಂಥ ಸುಂಕ ನೀತಿ ಒಂದೇ ಒಂದು ಗುರಿಯನ್ನು ಮಾತ್ರ ಹೊಂದಿರುತ್ತದೆ – ಅಪಾರದರ್ಶಕ ರಾಜಕೀಯ ಉದ್ದೇಶಕ್ಕಾಗಿ ತೆಗೆದುಕೊಂಡ ಕಠಿಣ ಕ್ರಮ.

AFWA ಯು ಇಂಥ ಅಪಾರದರ್ಶಕ ಸುಂಕ ನೀತಿಯನ್ನು ವಿರೋಧಿಸುತ್ತದೆ. ರಾಜಕೀಯ ಸಂಘರ್ಷಗಳ ಕಾರಣದಿಂದಾಗಿ ಸುಂಕಗಳನ್ನು ಅಸ್ತ್ರವಾಗಿ ಬಳಸುವುದು ನ್ಯಾಯವೇ ಅಲ್ಲ.

**2.** ಸುಂಕ **ಪರಿಷ್ಕರಣೆ ನ್ಯಾಯವಾಗಿರಬೇಕು ಮತ್ತು ಸಮಾನವಾಗಿರಬೇಕು**

ಸುಂಕ ವಿಧಿಸುವಿಕೆ ಅನಿವಾರ್ಯವಾಗಿರುವಲ್ಲಿ, ಅದು ನ್ಯಾಯವಾಗಿರಬೇಕು ಮತ್ತು ಸಮಾನವಾಗಿರಬೇಕು. ಈಗಾಗಲೇ ಇರುವಂಥ ಉದ್ಯಮದಲ್ಲಿ ಬದಲಾವಣೆ ಮಾಡಿ ಕೆಲವು ದೇಶಗಳಿಗೆ ಮಾತ್ರ ಅನುಕೂಲವಾಗುವಂಥ ಯಾವುದೇ ಸುಂಕ ನೀತಿಯನ್ನು AFWA ಯು ವಿರೋಧಿಸುತ್ತದೆ. ಅಂಥ ಅಸಮಾನ ಸುಂಕ ನೀತಿಯು ಏಷ್ಯಾದ ಉತ್ಪಾದನಾ ವ್ಯವಸ್ಥೆಯನ್ನೇ ಅಡಿಮೇಲು ಮಾಡುತ್ತದೆ. ನಿಜ ಹೇಳಬೇಕೆಂದರೆ, ಜಾಗತಿಕ ಉತ್ಪಾದನಾ ಜಾಲಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಕೈಗಾರಿಕೆಗಳನ್ನು ವಿಸ್ತರಿಸಲು ಅನುವುಮಾಡಿಕೊಟ್ಟಿದೆ. ಆದರೆ, ಉತ್ಪಾದನಾ ಸರಪಳಿಯ ತಳಮಟ್ಟದಲ್ಲಿ ಕಾರ್ಮಿಕರ ಹಕ್ಕು ಪಾಲನೆ ವಿರಳವಾಗಿ ಕಡಿಮೆ ವೇತನಕ್ಕೆ ದಾರಿತೆರೆದಿದೆ.

ಅಮೆರಿಕ ವಿಧಿಸುವ ಸುಂಕ ಜಾಗತಿಕ ಉತ್ಪಾದನಾ ಜಾಲಗಳ ಮೇಲೆ ದುಷ್ಪರಿಣಾಮ ಬೀರಿ ಉದ್ಯಮದ ಬೆಳವಣಿಗೆ ಕುಂಠಿತವಾಗಿ ಕಾರ್ಮಿಕ ಸಮೃದ್ಧಿಗೆ ಧಕ್ಕೆಯುಂಟು ಮಾಡುತ್ತದೆ. ಸುಂಕ ನೀತಿಯು ವಸ್ತುಗಳ ಮೂಲ ಬೆಲೆಯ ಅನುವಾತದಲ್ಲಿರಬೇಕು ಹಾಗೂ ಅಮೆರಿಕದ ಮಾರುಕಟ್ಟೆಯಲ್ಲಿ ಇತರ ದೇಶಗಳು ಹೊಂದಿರುವ ಪಾಲು ಹಾಗೆಯೇ ಮುಂದುವರಿಯುವಂತಿರಬೇಕು, ಅದು ನಷ್ಟವಾಗಬಾರದು. ಸುಂಕ ನೀತಿಯು ಏಷ್ಯಾದ ಗಾರ್ಮೆಂಟ್ ಕಾರ್ಮಿಕರನ್ನು ವಿಭಜಿಸಬಾರದು ಮತ್ತು ತಮ್ಮೊಳಗೆ ಸ್ಪರ್ಧೆಯನ್ನು ಉಂಟುಮಾಡಬಾರದು. ಕಾರ್ಮಿಕರು ಪ್ರಾದೇಶಿಕವಾಗಿ ಒಮ್ಮತವಿರುವ ಉದ್ಯಮ ಮೌಲ್ಯದ ಸ್ಥಿರತೆ ಹೊಂದಿರಬೇಕು.

**Asia Floor Wage Alliance**

**3.** ಸುಂಕ **ಮೊತ್ತವನ್ನು ಕಾರ್ಮಿಕರ ಕಲ್ಯಾಣಕ್ಕೆ ಬಳಸಬೇಕು**

ಜಾಗತಿಕ ಮಾರುಕಟ್ಟೆಯ ಬಹುಪಾಲು ವಸ್ತ್ರವನ್ನು ಏಷ್ಯಾವು ಉತ್ಪಾದಿಸುತ್ತಿದ್ದು, ಉತ್ಪಾದನಾ ವಲಯದಲ್ಲಿ ಅತೀ ಕಡಿಮೆ ವೇತನಕ್ಕೆ ದುಡಿಯುತ್ತಿರುವವರೆಂದರೆ ಗಾರ್ಮೆಂಟ್ ಕಾರ್ಮಿಕರೇ. ಕಡುಬಡತನದ ಕಾರ್ಮಿಕರು ಇರುವುದು ಏಷ್ಯಾದಲ್ಲಿಯೇ. ತೀರಾ ಕಡಿಮೆ ವೇತನದಿಂದಾಗಿ ಮಹಿಳಾ ಗಾರ್ಮೆಂಟ್ ಕಾರ್ಮಿಕರು ತಮ್ಮ ದಿನನಿತ್ಯ ಅಗತ್ಯಗಳನ್ನು ಪೂರೈಸಲು ಹೆಣಗಾಡುತ್ತಿದ್ದಾರೆ.

ಅಮೆರಿಕ ಸರಕಾರ ವಿಧಿಸಿರುವ ಸುಂಕಗಳು ಅವರ ಆದಾಯವನ್ನು ಹೆಚ್ಚಿಸುತ್ತವೆ. ಆದರೆ ಅವು ಒಂದು ರೀತಿಯಲ್ಲಿ ಜಾಗತಿಕ ಉತ್ಪಾದನಾ ಜಾಲಗಳ ಮೇಲೆ ವಿಧಿಸಲಾಗುತ್ತಿರುವ ತೆರಿಗೆಯಾಗಿದ್ದು, ಹಾಗೆಯೇ ಪರಿಗಣಿಸಲ್ಪಡಬೇಕು. ಜಾಗತಿಕ ಪೂರೈಕೆ ಸರಪಳಿಯಿಂದ ಅಮೆರಿಕ ಸರಕಾರ ಪಡೆಯುವ ತೆರಿಗೆ ಆದಾಯವನ್ನು ಸಮಾನವಾಗಿ ಹಂಚಬೇಕು ಎಂಬುದೇ AFWA ನ ಬೇಡಿಕೆ. **ಕನಿಷ್ಟ 50% ತೆರಿಗೆ ಆದಾಯವನ್ನು** ಗಾರ್ಮೆಂಟ್ ಕಾರ್ಮಿಕರ **ಸಾಮಾಜಿಕ ಭದ್ರತಾ ನಿಧಿ** ರೂಪದಲ್ಲಿ ಉತ್ಪಾದನಾ ರಾಷ್ಟ್ರಗಳಿಗೆ ನೀಡಬೇಕು. ಈ ರೀತಿ ಮಾಡುವಲ್ಲಿ ಅಪಾರದರ್ಶಕ ಸುಂಕ ನೀತಿಯ ದುಷ್ಪರಿಣಾಮಗಳನ್ನು ತಡೆಯುತ್ತದೆ. ತೆರಿಗೆಯಿಂದಾಗಿ ಉಂಟಾದ ಅನಾನುಕೂಲತೆ ಅಂದರೆ ಉದ್ಯೋಗ ನಷ್ಟ, ಫ್ಯಾಕ್ಟರಿ ಮುಚ್ಚುವಿಕೆ ಮುಂತಾದ ಸಮಸ್ಯೆಗಳಿಂದಾಗಿ ಭಾದಿತರಾದವರಿಗೆ ಬೆಂಬಲ ನೀಡಲು ಈ ಮೊತ್ತವನ್ನು ಬಳಸಬೇಕು.

ಸಾಮಾಜಿಕ ಭದ್ರತಾ ನಿಧಿ ವ್ಯವಸ್ಥೆಯನ್ನು ದ್ವಿಪಕ್ಷೀಯ ಒಪ್ಪಂದಗಳಲ್ಲಿ ಒಳಗೂಡಿಸಲು ವ್ಯಾಪಾರ ವ್ಯವಸ್ಥೆಗಳನ್ನು ಸ್ಥಾಪಿಸಬೇಕು ಮತ್ತು ಇದರಲ್ಲಿ ಸರಕಾರಗಳು ಮುಖ್ಯ ಪಾತ್ರವಹಿಸಬೇಕು.

**4. ಕಾರ್ಮಿಕರಿಗೆ ತಕ್ಕ ಪರಿಹಾರ ನೀಡುವ ಹೊಣೆಯನ್ನು ಬ್ರಾಂಡ್‌ಗಳಿಗೆ ನೇಮಿಸಬೇಕು:**

## Asia Floor Wage Alliance

ಪೂರೈಕೆ ಫ್ಯಾಕ್ಟರಿಗಳಿಂದ ಬ್ರಾಂಡ್‌ಗಳು ನಿರ್ಗಮಿಸುವಲ್ಲಿ ಅದರ ಪರಿಣಾಮ ತಕ್ಷಣವಾಗಿರುತ್ತದೆ ಮತ್ತು ವಿನಾಶಕಾರಿಯಾಗಿರುತ್ತದೆ. ಇಡೀ ಕಾರ್ಮಿಕ ವೃಂದ ಉದ್ಯೋಗ ಕಳೆದುಕೊಳ್ಳುತ್ತದೆ ಮತ್ತು ನಿರ್ಗತಿಕರಾಗುತ್ತಾರೆ. ಜಾಗತಿಕ ಗಾರ್ಮೆಂಟ್ ಪೂರೈಕೆ ಸರಪಳಿಯಲ್ಲಿ ಬ್ರಾಂಡ್‌ಗಳ ಇಂಥ ನಿರ್ಗಮನವೂ ಪದೇ ಪದೇ ನಡೆಯುತ್ತಿದ್ದು ಈ ಮೂಲಕ ಬ್ರಾಂಡ್‌ಗಳು ತಾವು ರಕ್ಷಾಕವಚ ತೊಟ್ಟು ಅಪಾಯವನ್ನು ಕಾರ್ಮಿಕರ ತಲೆಮೇಲೆ ಹಾಕುತ್ತವೆ.

ಈ ರೀತಿ ಆಗಿರುವುದನ್ನು ನಾವು ಕೋವಿಡ್-19 ಬಿಕ್ಕಟ್ಟು ಸಮಯದಲ್ಲಿ ಕಣ್ಣಾರೆ ಕಂಡಿದ್ದೇವೆ: ಬ್ರಾಂಡ್‌ಗಳು ರಾತ್ರೋರಾತ್ರಿ ಆರ್ಡರ್‌ಗಳನ್ನು ರದ್ದುಮಾಡಿ ಗಾರ್ಮೆಂಟ್ ಉತ್ಪಾದನಾ ದೇಶಗಳಲ್ಲಿನ ಪೂರೈಕೆ ಫ್ಯಾಕ್ಟರಿಗಳನ್ನು ತ್ಯಜಿಸಿದ್ದವು. ಲಕ್ಷಾಂತರ ಕಾರ್ಮಿಕರು ಮುಖ್ಯವಾಗಿ ಮಹಿಳೆಯರು ವೇತನವಿಲ್ಲದೇ ಯಾವುದೇ ಬೆಂಬಲವಿಲ್ಲದೆ ತೊಳಲಾಡುವಂತಾಯಿತು. ತಕ್ಷಣ ಸುರಕ್ಷಿತಾ ಹೆಜ್ಜೆ ತೆಗೆದುಕೊಳ್ಳದೇ ಹೋದಲ್ಲಿ ಸುಂಕಗಳ ನಿಮಿತ್ತ ಬ್ರಾಂಡ್‌ಗಳು ನಿರ್ಗಮಿಸಿ ಈಗ ಸಹ ಅದೇ ಪರಿಸ್ಥಿತಿ ಉಂಟಾಗುತ್ತದೆ.

**ಯಾವ ಬ್ರಾಂಡ್ ಸಹ AFWA ನ ಪ್ರಾದೇಶಿಕ ಚರ್ಚಾ ಮಂಡಳಿಯಾಗಿರುವ ಏಷ್ಯಾ ಬ್ರಾಂಡ್ ಬಾರ್ಗೆಯ್ನಿಂಗ್ ಗ್ರೂಪ್ (ABBG) ನೊಂದಿಗೆ ಮಾತುಕತೆ ನಡೆಸದ ಹೊರತು ಫ್ಯಾಕ್ಟರಿಯಿಂದ ನಿರ್ಗಮಿಸುವಂತಿಲ್ಲ.** ಈ ಕೆಳಗಿನ ಎರಡು ಸನ್ನಿವೇಶಗಳು ಉದ್ಭವಿಸಬಹುದು:

i. ಒಂದು ಬ್ರಾಂಡ್‌ನ ನಿರ್ಗಮನದಿಂದಾಗಿ **ಫ್ಯಾಕ್ಟರಿಯೊಂದು ಪೂರ್ಣವಾಗಿ ಮುಚ್ಚಲ್ಪಡುವಲ್ಲಿ** ಕಾರ್ಮಿಕರ ಪೂರ್ಣ ಸರ್ವಿಸ್ ವರ್ಷಗಳಿಗೆ ತಕ್ಕ ಪರಿಹಾರ ಮೊತ್ತ ನೀಡಬೇಕು, ಅವರನ್ನು ನಿರುದ್ಯೋಗಿಗಳಾಗಿ ಕೈಬಿಡಬಾರದು. ಪರಿಹಾರವು ಸಮಯೋಚಿತವಾಗಿರಬೇಕು, ಪಾರದರ್ಶಕವಾಗಿರಬೇಕು ಹಾಗೂ ಪೂರೈಕೆ ದೇಶ ಮತ್ತು ಕಂಪನಿಗಳೊಂದಿಗಿನ ತಮ್ಮ ವ್ಯವಹಾರ ಮಟ್ಟದ ಅನುಪಾತಕ್ಕನುಗುಣವಾಗಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ನೀತಿಮಟ್ಟಗಳಿಗನುಸಾರವಾಗಿ ಇರಬೇಕು.

ii. ಒಂದು ವೇಳೆ ಫ್ಯಾಕ್ಟರಿಯು **ಅರ್ಧ ಮುಚ್ಚುವಲ್ಲಿ**—ಹಾಗೂ ತಾತ್ಕಾಲಿಕ ಉದ್ಯೋಗ ನಷ್ಟ, ಕೆಲಸದ ಸಮಯ ಕಡಿತ ಅಥವಾ ವೇತನ ಕಡಿತ ಉಂಟಾಗುವಲ್ಲಿ—ಆಗಲೂ ಕಾರ್ಮಿಕರನ್ನು ಸಂರಕ್ಷಿಸಬೇಕು. ಆರ್ಡರ್ ಕಡಿಮೆಯಿರುವ ಕಾರಣ ಕಾರ್ಮಿಕರಿಗೆ ತಾತ್ಕಾಲಿಕ ಉದ್ಯೋಗ ನಷ್ಟ ಉಂಟಾಗುವಲ್ಲಿ ಆ ಸಮಯಾವಧಿಗೆ ಅವರ ವೇತನದ ಕನಿಷ್ಟ 75% ಮೊತ್ತ ನೀಡತಕ್ಕದ್ದು. ಒಂದು ವೇಳೆ ಶಾಶ್ವತ ಉದ್ಯೋಗ ನಷ್ಟ ಆಗುವಲ್ಲಿ ಪೂರ್ಣ ಮುಚ್ಚುವಿಕೆ ಪ್ರಮಾಣಕ್ಕನುಗುಣವಾಗಿ ನೀಡತಕ್ಕದ್ದು.

ಯಾವುದೇ ಪರಿಸ್ಥಿತಿಯಲ್ಲೂ ವಜಾಮಾಡಲಾದ ಎಲ್ಲಾ ಕಾರ್ಮಿಕರ ಪುನರ್ ನೇಮಕ ಕಡ್ಡಾಯವಾಗಿದೆ. ಸುಂಕಗಳ ತೀರ್ಮಾನಗಳಿಂದಾಗಿ ಉಂಟಾದ ಯಾವುದೇ ಸಮಸ್ಯೆಯನ್ನು ಯೂನಿಯನ್ ಅಥವಾ ಕಾರ್ಮಿಕರ ಹಕ್ಕುಗಳನ್ನು ಕಡೇಗಣಿಸುವ ಸಾಧನವಾಗಿ ಬಳಸಲಾಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವ ನೇರ ಹೊಣೆ ಬ್ರಾಂಡ್ಗಳದ್ದಾಗಿರುತ್ತದೆ. ಯಾವ ಕಾರಣಕ್ಕೂ ಕಾರ್ಮಿಕರನ್ನು ಕಡೆಗಣಿಸಬಾರದು.

-

ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಕಾರ್ಮಿಕರ ಒಕ್ಕೂಟ ಅಗತ್ಯವಾಗಿದ್ದು ಎಲ್ಲ ರೀತಿಯ ವ್ಯಾಪಾರ ಅನ್ಯಾಯಗಳನ್ನು ತೊಲಗಿಸಲು ಉತ್ತಮ ಪ್ರಣಾಳಿಕೆ ಆವಶ್ಯಕ. ಈ ನಿಟ್ಟಿನಲ್ಲಿ ಕೆಳಗಿನ ಎರಡು ಪ್ರಮುಖ ತತ್ವಗಳು ಸಹಾಯಕರ:

i. ಎಲ್ಲ ದೇಶಗಳಲ್ಲೂ ಸಮತೋಲನದ ಕೈಗಾರೀಕರಣ,

ii. ಜಾಗತಿಕ ಉತ್ಪಾದನಾ ಜಾಲಗಳಿಂದ ಬಂದ ತೆರಿಗೆ ಆದಾಯವನ್ನು ನ್ಯಾಯವಾಗಿ ಹಂಚುವುದು.

ಶೋಷಣೆ ಮಾಡುವ ಜಾಗತಿಕ ವ್ಯವಹಾರ ವ್ಯವಸ್ಥೆಯನ್ನು ನಾವು ವಿರೋಧಿಸುತ್ತೇವೆ. ಏಕೆಂದರೆ, ಅದು ಬ್ರಾಂಡ್‌ಗಳು ಬಿಲಿಯನ್‌ಗಟ್ಟಲೇ ಲಾಭಗಳಿಸಿ ಕಾರ್ಮಿಕರನ್ನು ಅದರಲ್ಲೂ ಮುಖ್ಯವಾಗಿ ಮಹಿಳೆಯರನ್ನು ಬಡತನ ಮತ್ತು ಸಾಲದ ಹೊಂಡಕ್ಕೆ ನೂಕುತ್ತದೆ. ಜಾಗತಿಕ ಉದ್ಯಮದ ನಿಯಮಗಳನ್ನು ತಿದ್ದಿಬರೆಯುವಂಥ ಸಮಯ ಈಗ

**Asia Floor Wage Alliance**

ಬಂದಿದೆ: ಕೇವಲ ಕೆಲವರನ್ನು ಶ್ರೀಮಂತರನ್ನಾಗಿಸುವ ಸ್ವಾರ್ಥಮಯ ವ್ಯವಸ್ಥೆ ಬೇಡ. ಕಾರ್ಮಿಕರು ಉದ್ಯಮದ ಜೀವನಾಡಿಗಳು. ಹಾಗಾಗಿ ಜಾಗತಿಕ ವಸ್ತ್ರ ಉದ್ಯಮದಲ್ಲಿ ನ್ಯಾಯ, ಸಮಾನತೆ, ಹೊಣೆಗಾರಿಕೆ ಇರಬೇಕು.

ಕಾರ್ಮಿಕರಿಗೆ ಕಡಿಮೆ ವೇತನ ನೀಡುವ ಮೂಲಕ ಲಾಭದ ಕೊಳ್ಳೆ ಹೊಡೆಯುವ ಬ್ರ್ಯಾಂಡ್‌ಗಳು ಬಿಕ್ಕಟ್ಟು ಬಂದಾಗ ಪರಾರಿಯಾಗದಂತೆ ನೋಡಿಕೊಳ್ಳಬೇಕು. ಸರಕಾರಗಳು ಉದ್ಯಮಗಳನ್ನು ಅಸ್ತ್ರವಾಗಿ ಬಳಸಿ ಮಾನವ ಜೀವವನ್ನು ಕಡೇಗಣಿಸಬಾರದು. ಜಾಗತಿಕ ಕಾರ್ಮಿಕ ಚಳುವಳಿಯು ಏಷ್ಯಾದ ಕಾರ್ಮಿಕ ಚಳುವಳಿಯೊಂದಿಗೆ ಕೈಜೋಡಿಸುವಂತೆ ನಾವು ಕರೇ ನೀಡುತ್ತೇವೆ. ಏಕೆಂದರೆ, ಕಾರ್ಮಿಕ ವರ್ಗದ ಒಂದು ಭಾಗದ ಮೇಲೆ ದಾಳಿ ನಡೆದರೇ ಅದು ಇಡೀ ಕಾರ್ಮಿಕ ವರ್ಗವನ್ನೇ ಅಪಾಯಕ್ಕೆ ಒಡ್ಡುತ್ತದೆ. ಹಾಗಾಗಿ, ಬ್ರ್ಯಾಂಡ್‌ಗಳ ಮೇಲೆ ಹೊಣೆಗಾರಿಕೆ ಹೇರುವ ಮೂಲಕ, ಉದ್ಯಮ ತೆರಿಗೆ ಆದಾಯವನ್ನು ಕಾರ್ಮಿಕರಿಗೆ ಹಂಚುವಂತೆ ಪುನರ್ ರಚನೆ ಮಾಡುವ ಮೂಲಕ ಹಾಗೂ ಶೋಷಣೆ ಮಾಡುವ ಉದ್ಯಮದ ವಿರುದ್ಧ ಒಗ್ಗಟ್ಟಾಗಿ ಎದ್ದು ನಿಲ್ಲುವ ಮೂಲಕ ನಾವು ನಮ್ಮ ಹೋರಾಟವನ್ನು ಮಾಡುತ್ತೇವೆ. ಹೋರಾಟಕ್ಕೆ ಬೆಂಬಲ ನೀಡದಿರುವುದು ದ್ರೋಹ, ನಿರ್ಲಕ್ಷ್ಯ ಮಾಡುವುದು ಅನಾದರ.